ಸಾಧ್ಯವಿತ್ತು. ವರ್ಷವೆಲ್ಲ ಹಾಗೆ ನೋಡುತ್ತಲೇ ಉಳಿದೆ. ಕಣ್ಣಿನಿಂದ ತೊಡಗಿದ ಮಾಂತ್ರಿಕತೆ ಮೈತುಂಬ ಹರಿಯತೊಡಗಿತು. ಮನದ ಮೂಲೆ ಮೂಲೆಗಳಲ್ಲಿ ಆವರಿಸಿ ಎಲ್ಲವೂ ತಾನೇ ಅನ್ನುವಂತೆ ಪರಿಣಮಿಸಿತು. ಶಾಲೆ ಬೇರೆಯಾಗಿ ಸಹವಾಸವಿರಲಿಲ್ಲ. ಮನೆಗೆ ಆಕೆ ಬರುವ ಹೊತ್ತಿಗೆ ತಪ್ಪದೇ ಕಾದಿರುತ್ತಿದ್ದೆ. ಮನೆಪಾಠದ ಅವಶ್ಯಕತೆ ಅವಳಿಗಿರಲಿಲ್ಲ. ಮನೆಗಾಗಿಯೇ ಬರುತ್ತಿದ್ದಳು. ಒಂಟಿಯಾಗಿ ಬೆಳೆಯುವ ಮಕ್ಕಳಿಗೆ ಜೀವ–ಜೀವಂತಿಕೆಗಳು ತುಂಬಿದ ಮನೆ ಮತ್ತು ಅದರದೇ ಆದ ತನ್ನತನಗಳಲ್ಲಿ ಅತಿಯಾದ ಆಕರ್ಷಣೆಯಿರುತ್ತದೆ. ಅಂತಸ್ತಿನ ಪರಿವೆಯೇ ಇಲ್ಲದೆ ಸಂಬಂಧಗಳು ಬೆಸೆದು ಬಿಗಿಯುತ್ತವೆ. ಗೇಟಿನ ಬಳಿ ಕಂಡಾಗಲೇ ಕಣ್ಣುಗಳಲ್ಲಿ ಉಕ್ಕಿ ಸೆಳೆಯುವ ಆ ಮೋಹಕ ಮಂದಹಾಸ, ದೈವದತ್ತವಾದ ಇನಿದನಿಯಲ್ಲಿ ಮೆತ್ತಗೆ ಆಡುತ್ತಿದ್ದ ಒಂದೆರಡು ಮಾತುಗಳು, ಸ್ನೇಹವೇ ಸ್ತ್ರೀರೂಪ ತಳೆದು ನಿಂತಂತಹ ಆ ನಿಲುವು, ನನ್ನೆಲ್ಲ ಸ್ವಕೀಯಗಳು – ಸಂವೇದನೆಗಳು ಒಟ್ಟಾಗಿ, ಜೀವವೇ ಕಣ್ಣಾಗಿ ಆಕೆಗಾಗಿ ಕಾಯುತ್ತಿದ್ದೆ. ಎಂದೆಂದಿಗೂ ಹೀಗೇ ಇರುತ್ತೇವೆ ಅಂತನಿಸುತ್ತಿತ್ತು. ದೇವರ ಕೋಣೆಯಲ್ಲಿ ಉರಿಸಿಟ್ಟ ನಂದಾದೀಪ ಆರಗೊಡದೆ ಬತ್ತಿ ಮೀಟಿ, ಎಣ್ಣೆತುಂಬಿ, ಬೆಳಕು ಚೆಲ್ಲಿದಂತೆ ಪ್ರೇಮಾ ಪ್ರತಿದಿನ ಬಂದುಹೋಗುತ್ತಿದ್ದಳು. ಮತ್ತೊಂದು ಹೊಸದಿನಕ್ಕಾಗುವಷ್ಟು ಉತ್ಸುಕತೆ ತುಂಬಿಕೊಂಡು, ಮುಚ್ಚಿದ ರೆಪ್ಪೆಗಳ ಒಳಗೂ ಅವಳದೇ ಲೇಪ ಹಚ್ಚಿಕೊಂಡು ಕನಸು ಕಾಣುತ್ತಿದ್ದೆ.

ಬೇಸಿಗೆಯ ಕೊನೆಯ ದಿನಗಳು. ಹಗಲು ರಾತ್ರಿಗಳನ್ನು ಬೇಯಿಸಿ ಸತಾಯಿಸುತ್ತಿದ್ದ ಸೆಖೆಯೊಂದಿಗೆ ಪರೀಕ್ಷೆಯ ತಯಾರಿಯ ಬಿಸಿಯೂ ಸೇರಿ ನಮ್ಮ ಮೈ ಮನಗಳ ಕಸುವೆಲ್ಲಾ ಹಿಂಡಿಹೋಗುತ್ತಿತ್ತು. ಸಂಜೆಗೆ ಪ್ರೇಮಾ ಮನೆಗೆ ಬಂದಾಗೊಮ್ಮೆ ತಂಗಾಳಿಯೇ ಲಂಗ–ದಾವಣಿ ತೊಟ್ಟು ಬಂದಂತಹ ತಂಪು! ನನ್ನ ನೋಟದ ತತ್ಪರತೆಯ ಶಾಖಕ್ಕೆ ಆಕೆಯ ತಲ್ಲೀನ ನೇತ್ರಗಳ ಸ್ನೇಹ ಸಂದೇಶ! ಅಮ್ಮನನ್ನು ಅರಸಿ ಅತ್ತಿತ್ತ ಅಲೆದಾಗಲೂ ನನ್ನ ಕಡೆಗೊಂದು ಸೆಳೆತದ ಸುಳಿಮಿಂಚು. ಇಂದಿನ ಕಾಲನಿರ್ಣಯದಲ್ಲಿ ಪರಸ್ಪರ ಸಂಬಂಧಗಳೆಲ್ಲಾ ತೀರ ತ್ವರಿತವಾಗಿ ಹುಟ್ಟುತ್ತ, ತುದಿಬೆರಳ ಚಳಕಗಳಲ್ಲಿ ಬೇಗನೆ ಬೆಳೆದು ಅಷ್ಟೇ ವೇಗವಾಗಿ ಅಳಿದೂ ಹೋಗುತ್ತವೆ. ಟಚ್ ಸ್ಕ್ರೀನಿನ ಮೇಲೆ ಕ್ಷಣದಲ್ಲಿ ಬದಲಾಗುವ ಚಿತ್ರಗಳಂತೆ ಅಗಣಿತವಾಗಿ, ಒಂದರ ಮೇಲೊಂದು ಮೂಡಿ ಮರೆಯಾಗುತ್ತವೆ. ಸಂಬಂಧದ ನೆಟ್‌ವರ್ಕ್ ಪಾಸ್‌ವರ್ಡ್ ಮರೆತ ಡಾಟಾದಂತೆ ಮೂಲೆ ಹಿಡಿದು ಮತ್ತೆ ಡಿಲೀಟಾಗಿ ಹೋಗುತ್ತದೆ. ಅಂದು ನಾವು ಈ ಒಂದು ಬಂಧವನ್ನು ಹೆಣೆಯಬೇಕಾದರೆ ಮೌನದ ದಾರಗಳನ್ನು ಹಿಡಿದು ಅದೆಷ್ಟು ಕಾಲ ಕಾದಿದ್ದೆವು ಅಂದುಕೊಂಡಾಗ ಅಚ್ಚರಿಯೆನಿಸುತ್ತದೆ. ಕೌಟುಂಬಿಕ ಸಂಸ್ಕಾರ ಮತ್ತು ನಿಲುವುಗಳು, ಸಾಮಾಜಿಕ ಬದ್ಧತೆ ಹಾಗು ಭಯ, ಭವಿಷ್ಯದ ನಿರ್ಣಯ ಮತ್ತು ಆವರಿಸಿ ನಿಂತ ನೀತಿಪಾಠಗಳು ಹೆಜ್ಜೆ ಹೆಜ್ಜೆಗೂ ತಡೆದುನಿಲ್ಲಿಸಿ ಹೆದರಿಸುತ್ತಿದ್ದವು. ನಮ್ಮಿಬ್ಬರ ನಡುವೆ ಅಮ್ಮನಿದ್ದಳು. ಆಕೆಯ ಸೂಕ್ಷ್ಮ ಗಮನ ನಮ್ಮ ಮೇಲಿತ್ತು. "ಶ್ಯಾಮಾ, ಬ್ರಾಹ್ಮಣರ ಹುಡುಗಿ. ಇದೇನೂ ಬೇಡ. ದೂರವಿರು. ದೊಡ್ಡದೊಂದು ಆಪತ್ತು ತಂದಿಡಬೇಡ. ಕುಟುಂಬಗಳ ನೆಮ್ಮದಿ ಕೆಡಿಸಬೇಡ." ಎಂದು ಇದರಿಂದ ಬರಬಹುದಾದ ಸಮಸ್ಯೆ–ಸನ್ನಿವೇಶಗಳನ್ನು ಮತ್ತೆಮತ್ತೆ ವಿವರಿಸಿದ್ದಳು. ಸ್ನೇಹದ ಪರಾಕಾಷ್ಠೆಯ ಆ ದಿನಗಳಲ್ಲೂ ಮತ್ತೆಲ್ಲ ಸಂವೇದನೆಗಳೊಂದಿಗೆ ಸಂಯಮ ಅನ್ನುವ ಮಂತ್ರವೊಂದು ಎಡೆಬಿಡದೆ ಉಳಿಯುತ್ತಿತ್ತು. ಹೀಗಿರಲು ಅಮ್ಮ ಎಂಬ ಅದ್ವೈತ ಕಾರಣವೇ... ಇರಬಹುದು. ನಮ್ಮಿಬ್ಬರಿಗೂ ಒಂದೇ ರೀತಿಯಾಗಿ ಆಕೆಯ ತಾಯ್ತನ ಪ್ರವರ್ತಿಸುತ್ತಿತ್ತು. ನೋವು ನೀಡುವ ನಡವಳಿಕೆ ನಮಗೆ ಸಾಧ್ಯವಿಲ್ಲ. ಅಲ್ಲದೆ ಆ ಸಮಯದಲ್ಲಿ ಅದುವರೆಗೂ ನಾವು ಭವಿಷ್ಯ, ಬಾಳುವೆ, ಮತ್ತೊಂದು ಎಂದು ಯೋಚಿಸುವ ಹಂತಕ್ಕೆ ತಲುಪಿರಲಿಲ್ಲ.

ಭಜನಾ ಮಂಡಲಿಯ ಆಶ್ರಯದಲ್ಲಿ ಊರಿಂದ ಹಲಮಂದಿ ಉತ್ತರಭಾರತ ಕ್ಷೇತ್ರದರ್ಶನಕ್ಕಾಗಿ ಹೊರಟುಹೋಗಿದ್ದರು. ಚಿಕ್ಕಪ್ಪ ಒಬ್ಬರ ಹೊರತಾಗಿ ನಮ್ಮ ಮನೆಮಂದಿ ಎಲ್ಲರೂ ಇದರಲ್ಲಿ